# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 503 (567) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಸೂರಜ್ ರೇವಣ್ಣ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 11.07.2023 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 5 ವರ್ಷಗಳಲ್ಲಿ ಹಾಸನ ಜಿಲ್ಲೆ, ಹಾಸನ ತಾಲ್ಲೂಕು ವ್ಯಾಪ್ತಿಯಲ್ಲಿ ನಿರ್ಮಿತವಾದ ಕೈಗಾರಿಕಾ ವಲಯಗಳ ವಿಸ್ತೀರ್ಣ ಎಷ್ಟು; (ಯೋಜನವಾರು ವಿವರ ನೀಡುವುದು) | ಕಳೆದ 5 ವರ್ಷಗಳಲ್ಲಿ ಹಾಸನ ತಾಲ್ಲೂಕು ವ್ಯಾಪ್ತಿಯಲ್ಲಿ ಹಾಸನ ಕೈಗಾರಿಕಾ ಬೆಳವಣಿಗೆ ಕೇಂದ್ರದಲ್ಲಿ ಮಂಡಳಿ ವತಿಯಿಂದ ಉಪಬಡಾವಣೆ-4 ನ್ನು 144.80 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ನಿರ್ಮಿಸಲಾಗಿದೆ. |
| ಆ) | ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ದೊಡ್ಡಬಸವನಹಳ್ಳಿ ಗ್ರಾಮದ ಈ ಕೆಳಕಂಡ ಸರ್ವೆ ನಂಬರ್‌ಗಳಾದ ಸರ್ವೆ ನಂಬರ್ 112/2, 102/1, 102/2, 102/3, 100/1, 100/2, 100/3, 100/4, 103/2, 103/3, 101 ಮತ್ತು 99 ರಲ್ಲಿ ಸ್ವಾಧೀನ ಪಡೆದುಕೊಂಡಿರುವ ಜಮೀನಿನ ವಿಸ್ತೀರ್ಣ ಎಷ್ಟು; ಯಾವ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾಗಿದೆ; (ಸಂಪೂರ್ಣ ವಿವರ ನೀಡುವುದು) | ದೊಡ್ಡಬಸನವಹಳ್ಳಿ ಗ್ರಾಮಕ್ಕೆ ಮೂಲಭೂತ ಸೌಕರ್ಯಗಳಾದ ಸ್ಮಶಾನ, ಪ್ರಾಥಮಿಕ ಪಾಠ ಶಾಲೆ, ಆಟದ ಮೈದಾನ, ಸಾರ್ವಜನಿಕ ಶೌಚಾಲಯ ಮತ್ತು ಇತ್ಯಾದಿಗಳ ಉದ್ದೇಶಕ್ಕೆ ಬಳಸಲು ಸರ್ವೆ ನಂಬರ್ 99, 101, 100/1, 100/2, 100/3, 100/4, 102/1, 102/2, 102/3, 103/2, 103/3 ಮತ್ತು 112/2 ರಲ್ಲಿ ಲಭ್ಯವಿದ್ದ 7 ಎಕರೆ 22 ಗುಂಟೆ ಜಮೀನನ್ನು ಪೌರಾಯುಕ್ತರು, ನಗರಸಭೆ, ಹಾಸನರವರಿಗೆ ದಿನಾಂಕ 13.02.2014 ರಂದು ಹಸ್ತಾಂತರಿಸಲಾಗಿರುತ್ತದೆ.<br><br>ಆದರೆ, ಸದರಿ ಜಮೀನಿನಲ್ಲಿ ನಗರಸಭೆ, ಹಾಸನ ಸಂಸ್ಥೆಯು ವಸತಿ ಉದ್ದೇಶಕ್ಕಾಗಿ ಬಡಾವಣೆ ನಿರ್ಮಿಸುತ್ತಿರುವುದು ಗಮನಕ್ಕೆ ಬಂದಿರುತ್ತದೆ.<br><br>ಈ ಸಂಬಂಧ, ದಿನಾಂಕ: 26.04.2022, 30.06.2022, 04.08.2022ರ ಪತ್ರದಲ್ಲಿ ಪೌರಾಯುಕ್ತರು, ನಗರ ಸಭೆ, ಹಾಸನರವರಿಗೆ ದೊಡ್ಡಬಸವನಹಳ್ಳಿ ಗ್ರಾಮಕ್ಕೆ ಸ್ಮಶಾನ, ಪ್ರಾಥಮಿಕ ಪಾಠ ಶಾಲೆ, ಆಟದ ಮೈದಾನ, ಸಾರ್ವಜನಿಕ ಶೌಚಾಲಯ ಮತ್ತು ಇತ್ಯಾದಿಗಳ ಉದ್ದೇಶಗಳಿಗಾಗಿ ನೀಡಿದ 7 ಎಕರೆ 22 ಗುಂಟೆ ಜಮೀನನ್ನು ಹಂಚಿಕೆ ಮಾಡಿರುವ ಉದ್ದೇಶಕ್ಕೆ ಬಳಸಲು ಮತ್ತು ಪ್ರಸ್ತುತ ಜಮೀನಿನಲ್ಲಿ ನಿರ್ಮಿಸಿರುವ ಶೆಡ್ಡುಗಳನ್ನು ತೆರವುಗೊಳಿಸಲು ಸೂಚಿಸಲಾಗಿದೆ. |
| ಇ) | ಈ ಸರ್ವೆ ನಂಬರ್ ಭೂ-ಪ್ರದೇಶವನ್ನು ದೊಡ್ಡಬಸವನಹಳ್ಳಿ ಗ್ರಾಮಕ್ಕೆ ಪ್ರಾಥಮಿಕ ಶಾಲೆ, ಆಟದ ಮೈದಾನ, ಸಾಮೂಹಿಕ ಶೌಚಾಲಯ, ಇತ್ಯಾದಿಗಳಿಗೆ ಮೀಸಲಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಹಾಗಿದ್ದಲ್ಲಿ, ದುರುಪಯೋಗ ಪಡಿಸಿಕೊಂಡಿರುವುದನ್ನು ತಡೆಗಟ್ಟುವಲ್ಲಿ ವಹಿಸಿರುವ ಕ್ರಮವೇನು; (ವಿವರ ನೀಡುವುದು) | |

ಸಂಖ್ಯೆ: ಸಿಐ 147 ಐಎಪಿ 2023

(ಎಂ.ಬಿ. ಪಾಟೀಲ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು